ಪಿರಿಯಾಪಟ್ಟಣದಲ್ಲಿ ಆಧುನಿಕವಾದ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ

1195(694) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾ ಪಟ್ಟಣ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿರಿಯಾಪಟ್ಟಣದಲ್ಲಿ ಸುಸಜ್ಜಿತವಾದ ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿ ಅದನ್ನು ಭೂ ಸೇನಾ ನಿಗಮದವರಿಗೆ ವಹಿಸಿಕೊಡಲಾಗಿದ್ದು, ಕಾಮಗಾರಿ ಪ್ರಾರಂಭ ಮಾಡದೇ ಇರಲು ಕಾರಣಗಳೇನು?

ಆ) ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗುವುದು?

ಇ) ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು?

ಈ) ಕಾಮಗಾರಿ ಪೂರ್ಣಗೊಳಿಸಲು ನಿಗಧಿಪಡಿಸಿರುವ ಅವಧಿ ಎಷ್ಟು?

ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್(ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು):

ಅ) ಕ್ರೀಡಾಂಗಣ ನಿರ್ಮಾಣದ ನಿವೇಶನದಲ್ಲಿ ಅನಧಿಕೃತ ಸಾಗುವಳಿದಾರರು ಅತಿಕ್ರಮಣ ಮಾಡಿರುವುದರಿಂದ ಕಾಮಗಾರಿಯನ್ನು ಪ್ರಾರಂಭಿಸಲು ಅಡಚಣೆ ಉಂಟಾಗಿದೆ.

ಆ) ನಿಗಧಿಗೊಳಿಸಿರುವುದಿಲ್ಲ.

ಇ) ಅತಿಕ್ರಮಣಗಳನ್ನು ತೆರವುಗೊಳಿಸಿದ ನಂತರ.

ಈ) ನಿಗಧಿಪಡಿಸಿರುವುದಿಲ್ಲ.

ಪಿರಿಯಾಪಟ್ಟಣದಲ್ಲಿ ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ರೈತರ ಬೆಳೆಗಳ ನಾಶ

1196(709) ಶ್ರೀ ಬಸವರಾಜು ಹೆಚ್.ಸಿ(ಪಿರಿಯಾಪಟ್ಟಣ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿರಿಯಾಪಟ್ಟಣ ತಾಲ್ಲೂಕಿನ ಕಾಡಿನ ಅಕ್ಕಪಕ್ಕದಲ್ಲಿರುವ ರೈತರ ಜಮೀನುಗಳಿಗೆ ಆನೆಗಳು ನುಗ್ಗಿದ್ದರಿಂದ ರೈತರು ಬೆಳೆದ ಫಸಲುಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಲಿ ಮಾಡಲಾಗಿರುವ ಟ್ರಂಚ್‌ಗಳು ಕಳೆದ 5-6 ವರ್ಷಗಳ ಹಿಂದೆ ಮಾಡಲಾಗಿದ್ದು ಅವುಗಳು ಮುಚ್ಚಿಹೋಗಿದ್ದು ಅವುಗಳನ್ನು ಆಧುನೀಕರಣಗೊಳಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಇ) ಟ್ರಂಚ್‌ಗಳು ಹಾಗೂ ಇತರೆ ರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಲು ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಅದಕ್ಕೆ ಸರ್ಕಾರ ಅನುದಾನ ಮಂಜೂರು ಮಾಡಿದೆಯೆ?

ಉ) ಮಾಡಿದ್ದಲ್ಲಿ, ಎಷ್ಟು ಅನುದಾನ ನಿಗಧಿಪಡಿಸಲಾಗಿದೆ?

ಶ್ರೀ ಕೆ.ಹೆಚ್. ರಂಗನಾಥ್(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು, ಪಿರಿಯಾಪಟ್ಟಣ ವಲಯದ ದೊಡ್ಡಹರನೆ ಮತ್ತು ಆನೆಚೌಕೂರು ಮೀಸಲು ಅರಣ್ಯ ಪ್ರದೇಶಗಳಲ್ಲಿ 1998-99 ಸಾಲಿನಲ್ಲಿ 25 ಕಿ.ಮೀ, 1999-2000 ಸಾಲಿನಲ್ಲಿ 9 ಕಿ.ಮೀ., ಆನೆ ದಾಟದಂತಹ ಕಂದಕ ಮಾಡಲಾಗಿದೆ.

ಅ) ಪ್ರತಿ ವರ್ಷ ಲಭ್ಯವಿರುವ ಅನುದಾನ ಉಪಯೋಗಿಸಿ ಆನೆ ದಾಟದಂತಹ ಕಂದಕದಲ್ಲಿ ಧೂಳು ತುಂಬಿರುವ ಕಡೆಗಳಲ್ಲಿ ಹೂಳು ತೆಗೆಯುವ ಮತ್ತು ಹಳ್ಳಗಳಿಂದ ಕೂಡಿರುವ ಪ್ರದೇಶಗಳಲ್ಲಿ ಆನೆತಡೆಗೋಡೆ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲಾಗಿರುತ್ತದೆ.

ಇ) ಹೌದು.

ಈ) ಮಾಡಿದೆ.

ಉ) ಆನೆ ದಾಟದಂತಹ ಕಂದಕಗಳ ನಿರ್ವಹಣೆಗೆ ರೂ. 10,00,000-00/- ನಿಗಧಿಪಡಿಸಲಾಗಿದೆ.

ಅರಣ್ಯ ಇಲಾಖೆಗೆ ಸೇರಿದೆಯೆಂದು ಸಾಗುವಳಿ ಜಮೀನುಗಳನ್ನು ವಶಪಡಿಸಿಕೊಳ್ಳುತ್ತಿರುವುದು

1197(710) ಶ್ರೀ ಹೆಚ್.ಸಿ. ಬಸವರಾಜು(ಪಿರಿಯಾಪಟ್ಟಣ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1978ಕ್ಕಿಂತಲೂ ಮುಂಚಿನಿಂದ ಸಾಗುವಳಿ ಮಾಡಿಕೊಂಡು ಜಮೀನಿನ ಸಾಗುವಳಿ ಪತ್ರವನ್ನು ಅಕ್ರಮ-ಸಕ್ರಮ ಪ್ರಾಧಿಕಾರದಿಂದ ಪಡೆದುಕೊಂಡು ಉಳುವೆ ಮಾಡುತ್ತಿರುವ ರೈತರ ಜಮೀನುಗಳನ್ನು ಇತ್ತೀಚೆಗೆ ಅರಣ್ಯ ಇಲಾಖೆಯವರು ಅರಣ್ಯ ಇಲಾಖೆಗೆ ಸೇರಿದ ಪ್ರದೇಶವೆಂದು ತಿಳಿಸಿ ಆ ಜಮೀನುಗಳನ್ನು ವಶಪಡಿಸಿಕೊಳ್ಳಲು ಮುಂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ರೈತರ ಜಮೀನಿನ ಹಿತರಕ್ಷಣೆಗೆ ಪೂರಕವಾದ ಯಾವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ?

ಇ) ಈ ಅರಣ್ಯ ಇಲಾಖೆಯದೆಂದು ಗುರುತಿಸಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು:(ಜಿಲ್ಲಾವಾರು:ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಇಂತಹ ಯಾವುದೇ ಪ್ರಕರಣಗಳು ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಪಿರಿಯಾಣಪಟ್ಟಣದಲ್ಲಿರುವ ಮಲೆನಾಡು ಅಭಿವೃದ್ಧಿ ಮಂಡಳಿಯ ರಸ್ತೆ ಕಾಮಗಾರಿಗಳು

1198(711) ಶ್ರೀ ಬಸವರಾಜು ಹೆಚ್.ಸಿ.(ಪಿರಿಯಾಪಟ್ಟಣ) : ಮಾನ್ಯ ಕಾನೂನು ಮತ್ತು ಎಂ.ಎ.ಡಿ.ಬಿ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪಿರಿಯಾಪಟ್ಟಣ ಮತ ಕ್ಷೇತ್ರದಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಆರ್.ಐ.ಡಿ.ಎಫ್ 3ರಲ್ಲಿ ಕೊಪ್ಪ-ಎನ್.ಇ.ಆಯಿಲ್ ಪ್ಲಾಂಟೇಷನ್ ರಸ್ತೆ ಹಾಗೂ ಹಿಟ್ನಹೆಬ್ಬಾಗಿಲು-ಮಾಕೋಡು ರಸ್ತೆಗಳನ್ನು ಡಾಂಬರೀಕರಣಕ್ಕೆ ಆಯ್ಕೆ ಮಾಡಲಾಗಿದ್ದು, ಆದರೆ ಕಾಮಗಾರಿಯನ್ನು ಪ್ರಾರಂಭಿಸಿ ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಕಾಮಗಾರಿಗಳನ್ನು ಪುನರಾರಂಭಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಎಷ್ಟು ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು;(ವಿವರ ನೀಡುವುದು)?